Misappropriation of Amount in Lakkavalli Panchayat

301. **Sri HANJI SHIVANNA** (Tarikere).—

Will the Minister for Development be pleased to state :—

(*a*) the amount misappropriated in Lakkavalli Panchayat, Tarikere Taluk from 1960 to 1968 as per the audit report;

(*b*) the action taken for the recovery of the said amount;

(*c*) whether the said amount will be recovered with interest; and is it not proper to supersede the said Panchayat ?

Sri P. M. NADGOUDA (Minister for Development).—

(*a*) Rs. 2,610.

(*b*) Action is being taken by the Assistant Commissioner to recover the amount from the concerned persons.

(*c*) Action will be taken in this behalf after the completion of enquiry by the Assistant Commissioner. As the present Panchayat has not misappropriated the amount, the question of superseding does not arise.

Budget Estimates for 1970-71

(General Discussion).

†ಶ್ರೀ ಎಸ್. ಶಿವಪ್ಪ (ಶ್ರವಣಬೆಳಗೊಳ).—ಮಾನ್ಯ ಸಭಾಪತಿಯವರೇ, 1970-71 ನೇ ಇಸವಿಯ ದೇಶದ ಆಯವ್ಯಯ ಪತ್ರವನ್ನು ಈ ಸಭೆಯ ಮುಂದೆ ನಮ್ಮ ರಾಜ್ಯದ ಆರ್ಥಿಕ ಸಚಿವರಾದ ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ಮಂಡನೆ ಮಾಡಿದ್ದಾರೆ. ಮಾನ್ಯ ರಾಮಕೃಷ್ಣ ಹೆಗಡೆಯವರು ಈ ವರ್ಷ ಒಂದು ಪ್ರಶಂಸನೀಯವಾದ ಬದಲಾವಣೆ ಮಾಡಿದ್ದಾರೆ ಎಂದು ನಾನಾದರೂ ಹೇಳುತ್ತೇನೆ. ಅದು ಏನೆಂದರೆ ಬಹಳ ಸ್ಪಷ್ಟವಾದ ಕನ್ನಡದಲ್ಲಿ ಈ ಭಾಷಣವನ್ನು ಓದಿದರು. ಬಹಳ ಚೆನ್ನಾಗಿ ಓದಿದರು. ಅದಕ್ಕಾಗಿ ಅದರ ವಿಚಾರ ಏನೇ ಇರಲಿ, ಅದರ ವಿಮರ್ಶೆ ಏನೇ ಇರಲಿ, ಆ ಬಗ್ಗೆ ಅವರನ್ನು ಹೃತ್ಪೂರ್ವಕವಾಗಿ ಈ ಸಭೆಯ ಪರವಾಗಿ ನಾನಾದರೂ ಕೂಡ ವಂದನೆಗಳನ್ನು ಅರ್ಪಣೆ ಮಾಡಬೇಕಾಗಿದೆ.

ಸಭಾಪತಿಯವರೇ, ಈಪೊತ್ತು ಇಷ್ಟೊಂದು ಸೊಗಸಾದ ಕನ್ನಡದಲ್ಲಿ ಓದಿದ ಭಾಷಣದಲ್ಲಿ ಇದರ ಬಗ್ಗೆ ನಾನು ಎರಡು ವಾಕ್ಯಗಳಲ್ಲೇ ಹೇಳುವುದಾದರೆ ಅವರು ಆ ಭಾಷಣದಲ್ಲಿ ಅನೇಕ ಉಪವಚನಗಳನ್ನು ಹೇಳಿದ್ದಾರೆ. ಮತ್ತು ತಮ್ಮ ಅನಿವಾರ್ಯಕತೆ, ಅಸಂತೃಪ್ತಿ, ಮತ್ತು ಹಣದ ಅಭಾವ ಇವುಗಳ ಬಗ್ಗೆ ಏನೆಂದೂ ಕೂಡ ಹೇಳಿದ್ದಾರೆ. ಇದನ್ನು ಅವರು ಭಾಷಣದ ಪ್ರಥಮ ಪುಟದಲ್ಲೇ ಹೇಳಿದ್ದಾರೆ. ಈ ಶತಮಾನದ ಆರನೆಯ ದಶಕದಿಂದ ಮುಂದಿನ ದಶಕಕ್ಕೆ ದಾಟಿ ಅಂದರೆ 7ನೇ ದಶಕಕ್ಕೆ ಕಾಲು ಇಡತಕ್ಕಂಥ ಕಾಲದಲ್ಲಿ ಅವರು ಏನೇನು ಮಾಡಬೇಕು ಎಂಬುದನ್ನು ಈ ಬಡ್ಜೆಟ್ಟಿನಲ್ಲಿ ಹೇಳಿದ್ದಾರೆ. ಅದು ಈ ರೀತಿ ಇದೆ :

> "ಈ ಶತಮಾನದ ಆರನೆಯ ದಶಕ ಆರಂಭವಾದಾಗ, ಜಗತ್ತಿನ ಅಭಿವೃದ್ಧಿ ಹೊಂದಿದ ಪ್ರದೇಶಗಳ ಬೆಳವಣಿಗೆ ಈ ದಶಕದಲ್ಲಿ ಸಾಧ್ಯವಾಗುತ್ತದೆ ಎಂದು ಭಾವಿಸಲಾಗಿತ್ತು. ಆದರೆ ಬಹ್ಯಾಂತರ್ ಮಾನವಕೋಟಿಯ ಪಾಲಿಗೆ ಆ ಭರವಸೆ ಪೂರ್ಣವಾಗಿ ಈಡೇರಿಲ್ಲ. ಪ್ರಗತಿಯೇ ಆಗಿಲ್ಲ ಎಂದು ಇದರ ಅರ್ಥವಲ್ಲ. ಹೀಗೆ ಹೇಳುವುದರ ಉದ್ದೇಶ—ಜನತೆ ಧೀರ ಪ್ರಯತ್ನಗಳನ್ನು ಮಾಡಿದರೂ ಸಫಾನವಾಗಿ ಆಗಿಲ್ಲ; ಎಂಬು